**MVC.No. 366/2024**

**ಪಿ. ಡಬ್ಲ್ಯೂ: 01**

**ದಿ: 17-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 2 ಮತ್ತು 3 ನೇ ಎದುರುದಾರರ ಪರ ಡಿ ಜಿ ಪಿ., ವಕೀಲರಿಂದ:**

ಅಪಘಾತದ ನಂತರ ಚಿಗಟೇರಿ ಆಸ್ಪತ್ರೆಗೆ ಹೋಗಿರುತ್ತೇವೆ. ಚಿಗಟೇರಿ ಆಸ್ಪತ್ರೆಯಲ್ಲಿ ಅಪಘಾತದ ಬಗ್ಗೆ ಹೇಳಿರುವ ಸಂಗತಿಗಳು ಸತ್ಯದಿಂದ ಕೂಡಿರುತ್ತವೆ ಎಂದರೆ ಸರಿ. ಮೋಟರ್ ಸೈಕಲ್ ನಂ.ಕೆಎ-17-ಇಟಿ-2475 ನನ್ನ ಗಂಡನಿಗೆ ಸಂಬಂಧಿಸಿದ್ದು ಇರುತ್ತದೆ. ನಾನು ಪ್ರಥಮ ಪಿಯುಸಿ ಓದಿದ್ದೇನೆ. ನನಗೆ ಕನ್ನಡ ಮತ್ತು ಆಂಗ್ಲಭಾಷೆ ಓದಲು ಬರೆಯಲು ಬರುತ್ತದೆ. ಚನ್ನಗಿರಿ ಪೊಲೀಸರು ಸಲ್ಲಿಸಿದ ಅಂತಿಮ ವರದಿಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ನಿಪಿ.8 ನ್ನು ಚಿಗಟೇರಿ ಆಸ್ಪತ್ರೆಯವರು ನನಗೆ ನೀಡಿದ್ದರು ಎಂದರೆ ಸರಿ. ನಾನು ಯಾವುದೇ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಜೈನ್ ಆಸ್ಪತ್ರೆಯಲ್ಲಿ 3 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನನಗೆ ಯಾವುದೇ ಶಸ್ತ್ರ ಚಿಕಿತ್ಸೆ ಮಾಡಿ ರಾಡ್ ಅಳವಡಿಸಿಲ್ಲ ಎಂದರೆ ಸರಿ. ನಾನು ಅಪಘಾತಕ್ಕಿಂತ ಮೊದಲು ತೋಟದಲ್ಲಿ ಅಡಿಕೆ ಕೆಲಸ ಮಾಡುತ್ತಿದ್ದೆ. ಈಗ ನಾನು ಆ ಕೆಲಸವನ್ನು ಮಾಡುತ್ತಿಲ್ಲ. ನಾನು ಅಡಿಕೆ ತೋಟದಲ್ಲಿ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಭಗವಾನ್ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದೆ ಎಂದು ಪೊಲೀಸರಿಗೆ ಮಾಹಿತಿ ನೀಡಿದ್ಧೆ. ನಾನು ಹಾಜರುಪಡಿಸಿದ ನಿಪಿ.10 ರಲ್ಲಿ ಕೆಲವು ಬಿಲ್ ಗಳು ಹಸ್ತಾಕ್ಷರದಲ್ಲಿ ಇರುತ್ತವೆ ಎಂದರೆ ಸರಿ. ಹಸ್ತಾಕ್ಷರದಲ್ಲಿ ಇರುವ ಬಿಲ್ಲುಗಳಲ್ಲಿ ಕೆಲವು ಆಯುರ್ವೇದಿಕ್ ಬಿಲ್ಲುಗಳು ಇರುತ್ತವೆ ಕೆಲವು ಆಸ್ಪತ್ರೆಯ ಬಿಲ್ಲುಗಳು ಇರುತ್ತವೆ. ಮೆಡಿಕಲ್ ಗಳಲ್ಲಿ ವೈದ್ಯರು ಬರೆದುಕೊಟ್ಟ ಚೀಟಿಗಳನ್ನು ತೋರಿಸಿದರೆ ಔಷಧಿ ಕೊಡುತ್ತಾರೆ ಎಂದರೆ ಸರಿ. ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಔಷಧಿ ಅಂಗಡಿಯವರ ಜೊತೆ ಶಾಮೀಲಾಗಿ ಹಸ್ತಾಕ್ಷರದ ಬಿಲ್ಲುಗಳನ್ನು ಸೃಷ್ಟಿ ಮಾಡಿಕೊಂಡು ಬಂದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ನಿಪಿ.2 ರಂತೆ ನನ್ನ ಗಂಡ ದೂರು ನೀಡಿದ್ದರು ಎಂದರೆ ಸರಿ. ನಿಪಿ.2 ರಲ್ಲಿ ಇರುವ 8 ಮತ್ತು 9 ನೇ ಸಾಲುಗಳು ಟೈಪ್ ರೈಟ್ ಮಷಿನ್ ನಲ್ಲಿ ಟೈಪ್ ಮಾಡಿದಂತೆ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ.2 ರಲ್ಲಿ ದಿನಾಂಕವನ್ನು ಸಹ ತಿದ್ದುಪಡಿ ಮಾಡಲಾಗಿದೆ ಎಂದರೆ ಸರಿ. ನನ್ನ ಗಂಡನ ಮೋಟರ್ ಸೈಕಲ್‌ಗೆ ವಿಮೆ, ಆರ್ ಸಿ ಇತ್ತು. ನನ್ನ ಗಂಡನಿಗೆ

ಚಾಲನಾ ಪರವಾನಗಿ ಸಹ ಇತ್ತು. ಅವುಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ಅವು ಕಳೆದು ಹೋಗಿರುತ್ತವೆ ಎಂದು ನುಡಿಯುತ್ತಾರೆ. ನನ್ನ ಗಂಡನ ಮೋಟರ್ ಸೈಕಲ್ ಗೆ ವಿಮೆ ಮತ್ತು ಆರ್ ಸಿ ಇರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಅವರಿಗೆ ಚಾಲನಾ ಪರವಾನಗಿ ಇರಲಿಲ್ಲ ಎಂದರೆ ಸರಿಯಲ್ಲ. ಅವುಗಳು ಒಂದು ವೇಳೆ ಇದ್ದರೆ ಅವುಗಳನ್ನು ನಾನು ಹಾಜರುಪಡಿಸುತ್ತಿದ್ದು ಅವು ಇಲ್ಲದ ಕಾರಣ ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪರಿಹಾರವನ್ನು ಪಡೆಯುವ ಉದ್ದೇಶದಿಂದ 1 ನೇ ಎದುರುದಾರನ ವಾಹನದ ಮೇಲೆ ಸುಳ್ಳು ದೂರು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಿಪಿ.10 ರಲ್ಲಿರುವ ದಿನಾಂಕ 10.07.2024 ರ ಮೆಡಿಕಲ್ ಬಿಲ್ ನಲ್ಲಿ 3 ಐಟಂ ಗಳನ್ನು ಖರೀದಿಸಿದ ಬಗ್ಗೆ ಗಣಕೀಕೃತ ಬಿಲ್ ನೀಡಿರುತ್ತಾರೆ ಎಂದರೆ ಸರಿ. ಅದರಲ್ಲಿ ರೂ.1000/- ಮತ್ತು 100 ರೂ ಎಂದು ಹಸ್ತಾಕ್ಷರದಲ್ಲಿ ಬರೆದಿರುತ್ತಾರೆ ಎಂದರೆ ಸಾಕ್ಷಿಯು ಕಾರಿನ ಬಾಡಿಗೆಯನ್ನು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಅದೇ ರೀತಿ ದಿನಾಂಕ 10.07.2024 ಎಂದು ಇರುವ ಇನ್ನೊಂದು ಬಿಲ್ ನಲ್ಲಿ ಅದರಲ್ಲಿ ರೂ.1000/- ಮತ್ತು 100 ರೂ ರಂತೆ ನಮೂದಿಸಿದ್ದಾರೆ ಎಂದರೆ ಸಾಕ್ಷಿಯು ಅದು ನನ್ನ ಗಂಡನಿಗೆ ಸಂಬಂಧಿಸಿದ ಬಿಲ್ ಇರುತ್ತದೆ ಎಂದು ನುಡಿಯುತ್ತಾರೆ. ಈಗ ಹಾಜರುಪಡಿಸಿರುವ ವೈದ್ಯಕೀಯ ದಾಖಲೆಗಳನ್ನು ಹೊರತುಪಡಿಸಿ ನನ್ನ ಬಳಿ ಬೇರೆ ಯಾವುದೇ ವೈದ್ಯಕೀಯ ದಾಖಲೆಗಳು ಇಲ್ಲ ಎಂದರೆ ಸರಿ. ಅಪಘಾತದಿಂದ ನನಗೆ ಮೂಳೆ ಮುರಿತ ಆಗಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಗೆಂದು 1 ಲಕ್ಷದಷ್ಟು ಹಣ ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ತಿಂಗಳಿಗೆ 20 ಸಾವಿರ ಆದಾಯ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಬಂದು ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿರುವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.